# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 638 (690) |
| **ಸದಸ್ಯರ ಹೆಸರು** | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : | 22/07/2024. |
| **ಉತ್ತರಿಸುವ ಸಚಿವರು** | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ನೇರ ನೇಮಕಾತಿ ಹೊಂದಿದ ನೌಕರರಿಗೆ ವೃಂದ ಮತ್ತು ನೇಮಕಾತಿ ನಿಯಮಗಳಿವೆಯೇ? (ವಿವರ ನೀಡುವುದು) | ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ನೇರ ನೇಮಕಾತಿ ಹೊಂದಿದ ನೌಕರರಿಗೆ ವೃಂದ ಮತ್ತು ನೇಮಕಾತಿ ನಿಯಮಗಳಿರುವುದಿಲ್ಲ.<br><br>ಈ ಹಿಂದೆ ಇಲಾಖಾ ಸಚಿವರ, ಅಧ್ಯಕ್ಷತೆಯಲ್ಲಿ ದಿನಾಂಕ:31/10/1998 ರಂದು ನಡೆದ, ರಾಜ್ಯ ಸಲಹಾ ಸಮಿತಿ ಉಪಸಮಿತಿ ಸಭೆಯ ನಡಾವಳಿಯಲ್ಲಿ "ನಿಧಿಗಳ ಸಿಬ್ಬಂದಿಯವರಿಗೆ ಪದೋನ್ನತಿ ಬಡ್ತಿ ನೀಡುವ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ಕಡತದ ಮೂಲಕ ಆಯುಕ್ತರು: ಕಾರ್ಯದರ್ಶಿ: ಖಜಾಂಚಿಯವರಿಗೆ ಸಲ್ಲಿಸಿ, ಆದೇಶ ಪಡೆಯುವಂತೆ ಹಾಗೂ ಸೇವಾ ವಿಷಯಗಳಿಗೆ ಸಂಬಂಧಿಸಿದ ತೀರ್ಮಾನವನ್ನು ಕಛೇರಿಯ ಹಂತದಲ್ಲೆ ತೆಗೆದುಕೊಳ್ಳಬೇಕೆಂದು, ಸಭೆಯ ಮುಂದೆ ತರಬಾರದು" ಎಂಬುದಾಗಿ ಉಪಸಮಿತಿಯ ಸಭೆಯ ನಡಾವಳಿಯಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ. (**ಅನುಬಂಧ-1)**<br><br>ಅದರಂತೆ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ನೇರ ನೇಮಕಾತಿ ಸಿಬ್ಬಂದಿಗಳಿಗೆ ಆಯುಕ್ತರ ಹಂತದಲ್ಲಿ ನೇಮಕಾತಿ/ಬಡ್ತಿಗಳನ್ನು ನೀಡಲಾಗಿರುತ್ತದೆ. |
| ಆ) | ವೃಂದ ಮತ್ತು ನೇಮಕಾತಿ ನಿಯಮಗಳಿಲ್ಲದೇ ನೇಮಕಾತಿ ಮತ್ತು ಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶಗಳಿವೆಯೇ; ಅವಕಾಶಗಳಿದ್ದಲ್ಲಿ ಆದೇಶದ ಪ್ರತಿ ನೀಡುವುದು; | |
| ಇ) | ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಲ್ಲಿ ನೀಡಲಾಗುತ್ತಿರುವ ವೈದ್ಯಕೀಯ ಧನಸಹಾಯದ ಗುಂಪುಗಳಾವುವು / ವರ್ಗಗಳಾವುವು; (ವಿವರ ನೀಡುವುದು) | ವೈದ್ಯಕೀಯ ಧನ ಸಹಾಯದ ಕುರಿತಂತೆ ಎ, ಬಿ, ಸಿ, ಡಿ ಎಂಬ 4 ಗುಂಪುಗಳಿವೆ. ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದಂತೆ ಖಾಯಿಲೆಗಳ ವರ್ಗೀಕರಣ ಗುಂಪುಗಳ ವಿವರವನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಈ) | ಯಾವ ಯಾವ ವರ್ಗಗಳಲ್ಲಿ ಗರಿಷ್ಟ ಧನಸಹಾಯ ನೀಡಲಾಗುತ್ತಿದೆ;<br><br>ಒಮ್ಮೆ ಗರಿಷ್ಟ ಧನಸಹಾಯ ಪಡೆದು ಮತ್ತೆ ಧನಸಹಾಯ ಪಡೆಯಲು ಅವಕಾಶಗಳಿವೆಯೇ? (ಈ ಕುರಿತು ಸರ್ಕಾರದ ಪ್ರತಿ ನೀಡುವುದು | ಈ ಕಛೇರಿಯ ಸುತ್ತೋಲೆಯ ಪ್ರಕಾರ 'ಡಿ' ಗುಂಪಿನ ಖಾಯಿಲೆಗೆ ಗರಿಷ್ಠ ಧನ ಸಹಾಯ ನೀಡಲಾಗುತ್ತದೆ (**ಅನುಬಂಧ-3**)<br><br>ಡಿ' ಗುಂಪಿನ ಖಾಯಿಲೆಗೆ ಗರಿಷ್ಠ ಧನ ಸಹಾಯ ನೀಡಲಾಗುತ್ತದೆ ಒಮ್ಮೆ ಗರಿಷ್ಠ ಧನ ಸಹಾಯ ಪಡೆದು ಮತ್ತೆ ಧನ ಸಹಾಯ ಪಡೆಯಲು ಅವಕಾಶವಿರುವುದಿಲ್ಲ. (**ಅನುಬಂಧ-4**) |

| | | |
|---|---|---|
| | | 1. 2010 ರಲ್ಲಿ ಸಮಿತಿಯು ತೆಗೆದುಕೊಂಡ ತೀರ್ಮಾನದಂತೆ ಡಿ ಗುಂಪಿನ ಕ್ಯಾನ್ಸರ್ ಮೂತ್ರಪಿಂಡದ ಖಾಯಿಲೆ ಹೃದ್ರೋಗ ಈ ಖಾಯಿಲೆಗಳಿಗೆ ಜೀವನಪರ್ಯಂತ ಒಂದು ಬಾರಿಗೆ ಮಾತ್ರ ರೂ ೧೫,೦೦೦/- ಗಳ ಧನಸಹಾಯ ನೀಡಲಾಗುತ್ತದೆ ಎಂಬುದಾಗಿರುತ್ತದೆ.<br>2. 2013ರಲ್ಲಿ ಮಾರಣಾಂತಿಕ ಖಾಯಿಲೆಗಳಿಗೆ ಧನಸಹಾಯವನ್ನು ರೂ.30,000/-/- ಗಳಿಗೆ ಹೆಚ್ಚಿಸಿ ಸಮಿತಿಯಿಂದ ಅನುಮೋದಿಸಲಾಗಿರುತ್ತದೆ.<br>3. 2014ರ ಸಭಾ ನಡಾವಳಿಯಲ್ಲಿ ಮಾರಣಾಂತಿಕ ಖಾಯಿಲೆಗಳ ಚಿಕಿತ್ಸೆಗಾಗಿ ಗರಿಷ್ಠ ಮಿತಿಯನ್ನು ಒಂದು ಬಾರಿಯ ಕ್ರಮವಾಗಿ ಮಾತ್ರ ರೂ. 50,000/- ಕ್ಕೆ ಹೆಚ್ಚಿಸಿ ಅನುಮೋದಿಸಲಾಗಿರುತ್ತದೆ.<br>4. 01/02/2018ರ ಸಭಾ ನಡಾವಳಿಯಲ್ಲಿ ಡಿ ಗುಂಪಿನ ಖಾಯಿಲೆಗೆ ರೂ. 1,00, 000/- ಗಳಿಗೆ ಹೆಚ್ಚಿಸಿ ಅನುಮೋದಿಸಲಾಗಿರುತ್ತದೆ.<br>5. ದಿ:12/02/2023ರ ಸುತ್ತೋಲೆಯನ್ವಯ ಡಿ ಗುಂಪಿನ ಖಾಯಿಲೆ/ಗೆ ಪರಿಹಾರ ಧನವನ್ನು ರೂ.2,50,000/- ಗಳಿಗೆ ಹೆಚ್ಚಿಸಲಾಗಿರುತ್ತದೆ.<br><br>ಈ ನಿರ್ಣಯಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಇಲಾಖೆ/ಉನ್ನತ ಶಿಕ್ಷಣ ಇಲಾಖೆ ಹಾಗೂ ಆಯುಕ್ತರು ಹಾಗೂ ಕಾರ್ಯದರ್ಶಿಗಳು/ ಖಜಾಂಚಿಗಳು ಶಿಕ್ಷಕರ ಕಲ್ಯಾಣ ನಿಧಿ ಇವರ ಉಪಸ್ಥಿತಿಯಲ್ಲಿ ನಡೆಯುವ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ನಿರ್ಣಯಗಳನ್ನು ಕೈಗೊಂಡು ಅನುಷ್ಠಾನಗೊಳಿಸಲಾಗುತ್ತಿದೆ. |

**ಇಪಿ 123 ಡಿಎಆರ್ 2024 / 1464175**

(**ಎಸ್. ಮಧುಬಂಗಾರಪ್ಪ**)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು

ಅನುಬಂಧ-01

ದಿನಾಂಕ 31-10-1998ರಂದು ನಡೆದ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ನಿಧಿಗಳ ಉಪಸಮಿತಿ ಸಭೆಯ ನಡವಳಿಗಳು

<u>ಸಭೆಯಲ್ಲಿ ಹಾಜರಿದ್ದ ಗಣ್ಯರು:</u>

1) ಆಯುಕ್ತರು,
   ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ
   ನಿಧಿಗಳ ಕಾರ್ಯದರ್ಶಿ:ಖಜಾಂಚಿಗಳು .. ಅಧ್ಯಕ್ಷರು

2) ನಿರ್ದೇಶಕರು,
   ರಾಜ್ಯ ಶಿಕ್ಷಣ ಸಂಶೋಧನೆ ಮತ್ತು
   ತರಬೇತಿ ಸಂಸ್ಥೆ .. ವಿಶೇಷ ಆಹ್ವಾನಿತರು

3) ಉಪನಿರ್ದೇಶಕರು,
   ಪದವಿಪೂರ್ವ ಶಿಕ್ಷಣ ಇಲಾಖೆ .. ವಿಶೇಷ ಆಹ್ವಾನಿತರು

4) ಅಧ್ಯಕ್ಷರು,
   ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ
   ಶಿಕ್ಷಕರ ಸಂಘ .. ಸದಸ್ಯರು

5) ಶ್ರೀ ಎಂ.ವಿ. ಸಿದ್ಧಲಿಂಗಮೂರ್ತಿ
   ನಿವೃತ್ತ ನಿರ್ದೇಶಕರು
   ಸಾರ್ವಜನಿಕ ಶಿಕ್ಷಣ ಇಲಾಖೆ .. ಸದಸ್ಯರು

6) ಶ್ರೀ ಓ. ಉಮಾಪತಿ
   ಮಾಜಿ ಅಧ್ಯಕ್ಷರು,
   ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ
   ಶಿಕ್ಷಕರ ಸಂಘ .. ಸದಸ್ಯರು

7) ಶಾಲೆಗಳ ಮುಖ್ಯ ವೈದ್ಯಕೀಯ ಪರಿವೀಕ್ಷಕರು
   ಆಯುಕ್ತರ ಕಛೇರಿ,
   ಸಾರ್ವಜನಿಕ ಶಿಕ್ಷಣ ಇಲಾಖೆ .. ಸದಸ್ಯರು

<u>ಗೈರುಹಾಜರಾದವರು:</u>

1) ಅಧ್ಯಕ್ಷರು,
   ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯಶಿಕ್ಷಕರ
   ಹಾಗೂ ಸಂಯುಕ್ತ ಪದವಿಪೂರ್ವ ಕಾಲೇಜುಗಳ
   ಪ್ರಾಂಶುಪಾಲರ ಸಂಘ

2) ಡಾ: ಜಯಲಕ್ಷ್ಮಿ
   ನಿವೃತ್ತ ಪ್ರಾಂಶುಪಾಲರು
   ಆರ್.ವಿ. ಶಿಕ್ಷಣ ಮಹಾವಿದ್ಯಾಲಯ
   ಬೆಂಗಳೂರು

—

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ನಿಧಿಗಳ ಉಪಸಮಿತಿಯು ದಿನಾಂಕ 31-10-1998ರಂದು ಬೆಳಿಗ್ಗೆ 11.00 ಗಂಟೆಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಉಪಸಮಿತಿಯ ಸದಸ್ಯರ ಪರಿಚಯವನ್ನು ಅಧ್ಯಕ್ಷರಿಗೆ ಮಾಡಿಕೊಡಲಾಯಿತು. ನಂತರ ಉಪಸಮಿತಿಯು, ಸಭೆಯ ಮುಂದೆ ಮಂಡಿಸಲಾದ ವಿಷಯಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ನಿರ್ಣಯಗಳನ್ನು ತೆಗೆದುಕೊಂಡಿತು:—

1) ಹಿಂದಿನ ಸಭೆಯ ನಡವಳಿಗಳ ಮೇಲೆ ಕಛೇರಿಯಿಂದ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿಯನ್ನು ಓದಿ ದಾಖಲು ಮಾಡುವುದು

ದಿನಾಂಕ 30—4—98ರಂದು ನಡೆದ ಉಪಸಮಿತಿ ಸಭೆಯ ನಡವಳಿಗಳ ಮೇಲೆ ಕಛೇರಿಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿಯನ್ನು ಓದಿ ದಾಖಲು ಮಾಡಲಾಯಿತು.

2) ಸೇವೆಯಲ್ಲಿರುವಾಗಲೇ ಮೃತಹೊಂದಿದ ಶಿಕ್ಷಕರ ಕುಟುಂಬದವರಿಗೆ ಮಂಜೂರು ಮಾಡಿರುವ ಪರಿಹಾರ ಧನವನ್ನು ಸಕ್ರಮಗೊಳಿಸುವ ಬಗ್ಗೆ

61 ಪ್ರಕರಣಗಳಿಗೆ ತಲಾ ರೂ.5,000ಗಳಂತೆ, ಒಟ್ಟು ರೂ.3,05,000ಗಳ ಕುಟುಂಬ ಪರಿಹಾರ ಧನ ಮಂಜೂರು ಮಾಡಿರುವುದನ್ನು ಸಮಿತಿಯು ಸಕ್ರಮ ಗೊಳಿಸಿತು.

3) ಶಿಕ್ಷಕರಿಗೆ ಮಂಜೂರು ಮಾಡಿರುವ ವೈದ್ಯಕೀಯ ಧನ ಸಹಾಯವನ್ನು ಸಕ್ರಮ ಗೊಳಿಸುವ ಬಗ್ಗೆ

ವೈದ್ಯಕೀಯ ಸಮಿತಿಯು 660 ಪ್ರಕರಣಗಳಲ್ಲಿ ಮಂಜೂರು ಮಾಡಿರುವ ಒಟ್ಟು ರೂ.22,86,630ಗಳ ವೈದ್ಯಕೀಯ ಧನ ಸಹಾಯವನ್ನು ಸಮಿತಿಯು ಸಕ್ರಮಗೊಳಿಸಿತು.

ಹಿಂದಿನ ಉಪಸಮಿತಿಯು ದಿನಾಂಕ 30—4—98ರಲ್ಲಿ ಸಭೆ ಸೇರಿದಲಾಗಾಯ್ತು, 2 ತಿಂಗಳಿಗೊಮ್ಮೆ ಸಭೆಯನ್ನು ಕರೆಯದೆ, 5 ತಿಂಗಳನಂತರ ಈಗ ಸಭೆಯನ್ನು ಕರೆದಿರುವುದಕ್ಕೆ ಸದಸ್ಯರು ಆಕ್ಷೇಪಣೆ ವ್ಯಕ್ತಪಡಿಸಿದರು. ರಾಜ್ಯ ಸಮಿತಿಯ ಅವಧಿಯು ಮುಗಿದ ಕಾರಣ, ಸಮಿತಿಯು ಪುನರ್ರಚನೆಯಾದನಂತರ ಸಭೆಯನ್ನು ಕರೆಯ ಬೇಕೆಂದು ಹಿಂದಿನ ಆಯುಕ್ತರು/ಕಾರ್ಯದರ್ಶಿ—ಖಜಾಂಚಿಗಳು ಅಭಿಪ್ರಾಯ ಹೊಂದಿದ್ದರಿಂದ ಸಭೆಯನ್ನು ಕರೆಯಲು ವಿಳಂಬವಾಯಿತು ಎಂಬುದನ್ನು ವಿಧಿಗಳ ಪ್ರಭಾರಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.

4) ಆಕಸ್ಮಿಕ ಮರಣಕ್ಕೀಡಾದ ವಿದ್ಯಾರ್ಥಿಗಳ ಕುಟುಂಬದವರಿಗೆ ಮಂಜೂರು ಮಾಡಿರುವ ಪರಿಹಾರ ಧನವನ್ನು ಸಕ್ರಮಗೊಳಿಸುವ ಬಗ್ಗೆ

ಆಕಸ್ಮಿಕ ಮರಣಕ್ಕೀಡಾದ ನಾಲ್ವರ ವಿದ್ಯಾರ್ಥಿಗಳ ಕುಟುಂಬದವರಿಗೆ ತಲಾ ರೂ.5,000ಗಳಂತೆ, ಒಟ್ಟು ರೂ.20,000 ಮೊತ್ತದ ಪರಿಹಾರ ಧನ ಮಂಜೂರು ಮಾಡಿರುವುದನ್ನು ಸಮಿತಿಯು ಸಕ್ರಮಗೊಳಿಸಿತು.

5) ವಿದ್ಯಾರ್ಥಿಗಳಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಮಂಜೂರು ಮಾಡಿರುವ ಧನ ಸಹಾಯವನ್ನು ಸಕ್ರಮಗೊಳಿಸುವ ಬಗ್ಗೆ

ವೈದ್ಯಕೀಯ ಚಿಕಿತ್ಸೆಗಾಗಿ ಮೂವರು ವಿದ್ಯಾರ್ಥಿಗಳಿಗೆ ಒಟ್ಟು ರೂ.20,000 ಮೊತ್ತದ ಧನ ಸಹಾಯ ಮಂಜೂರು ಮಾಡಿರುವುದನ್ನು ಸಮಿತಿಯು ಸಕ್ರಮ ಗೊಳಿಸಿತು.

[illegible]) ಗುಂಡ್ಲುಪೇಟೆ [illegible] ಕೇಂದ್ರದಲ್ಲಿ ಹಾಲಿ ಇರುವ ಗುರುಭವನವಲ್ಲದೆ ಇನ್ನೊಂದು ಹೊಸ ಗುರುಭವನ ನಿರ್ಮಾಣ ಮಾಡಲು ನಿಧಿಗಳಿಂದ ಅನುದಾನ <u>ಮಂಜೂರು ಮಾಡುವ ಬಗ್ಗೆ</u>

ಈಗಿರುವ ಗುರುಭವನವನ್ನು ವಿಸ್ತರಿಸಲು ಗುರುಭವನ ಸಮಿತಿಯವರು ಮುಂದೆ ಬಂದಲ್ಲಿ, ಪ್ರಸ್ತುತ ದರದಲ್ಲಿ ಅನುದಾನ ಮಂಜೂರು ಮಾಡಿ, ಇದರಲ್ಲಿ ಈ ಹಿಂದೆ ನೀಡಿರುವ ಅನುದಾನ ರೂ.80,000ಗಳನ್ನು ಕಡಿತಗೊಳಿಸುವಂತೆ ಸಮಿತಿಯು ಸೂಚಿಸಿತು.

7) ಮಾಗಡಿ ತಾಲ್ಲೂಕು ಕೇಂದ್ರದಲ್ಲಿ ನಿರ್ಮಾಣವಾಗಿರುವ ಗುರುಭವನದ ಸುತ್ತಲೂ ಕಾಂಪೌಂಡ್, ಅಡಿಗೆ ಮನೆ ಮತ್ತು ಶೌಚಾಲಯಗಳನ್ನು ನಿರ್ಮಿಸಲು ನಿಧಿಗಳಿಂದ <u>ಅನುದಾನ ನೀಡುವ ಬಗ್ಗೆ</u>

ರಾಜ್ಯದಲ್ಲಿ ಈಗಾಗಲೇ ನಿರ್ಮಾಣವಾಗಿರುವ ಗುರುಭವನಗಳು ಕಳೆದ 2 ವರ್ಷಗಳಿಂದ ಯಾವ ರೀತಿ ಕಾರ್ಯ ನಿರ್ವಹಿಸುತ್ತಿವೆ ಮತ್ತು ಇವುಗಳನ್ನು ಉದ್ದೇಶಿತ ಕಾರ್ಯಕ್ಕಾಗಿ ಬಳಸಿಕೊಳ್ಳಲಾಗುತ್ತಿದೆಯೋ ಎಂಬ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ, ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಮಂಡಿಸುವಂತೆ ಸಮಿತಿಯು ಸೂಚಿಸಿತು.

8) ದಿನಾಂಕ 22–5–98ರಂದು ನಡೆದ ರಾಜ್ಯ ಸಮಿತಿಯ ತೀರ್ಮಾನದಂತೆ, ದೀರ್ಘ ಸೇವೆ ಸಲ್ಲಿಸಿರುವ ನಿಧಿಗಳ ಸಿಬ್ಬಂದಿಯವರಿಗೆ ಬಡ್ತಿ ನೀಡುವ ಬಗ್ಗೆ ಉಪಸಮಿತಿಯ <u>ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳುವುದು</u>

ಈ ಕೆಳಕಂಡ ಸಿಬ್ಬಂದಿಯವರಿಗೆ ಪದೋನ್ನತಿ ನೀಡುವ ವಿಚಾರದಲ್ಲಿ ವಿವರವಾದ ಪ್ರಸ್ತಾವನೆಯನ್ನು ಕಡತದ ಮೂಲಕ ಆಯುಕ್ತರು:ಕಾರ್ಯದರ್ಶಿ–ಖಜಾಂಚಿಯವರಿಗೆ ಸಲ್ಲಿಸಿ, ಆದೇಶ ಪಡೆಯುವಂತೆ ಸಮಿತಿಯು ಸೂಚಿಸಿತು. ಅಲ್ಲದೆ, ಸೇವಾ ವಿಷಯಗಳಿಗೆ ಸಂಬಂಧಿಸಿದ ತೀರ್ಮಾನವನ್ನು ಕಛೇರಿಯ ಹಂತದಲ್ಲಿ ತೆಗೆದುಕೊಳ್ಳಬೇಕೆಂದೂ, ಸಭೆಯ ಮುಂದೆ ತರಬಾರದಾಗಿ ಸಮಿತಿಯು ಸೂಚಿಸಿತು.

1) ನಿಯಮ 32ರ ಅನ್ವಯ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಎನ್. ನಾಗರಾಜನ್ ಇವರಿಗೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ
2) ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಎನ್. ರಾಜಶೆಟ್ಟಿ ಇವರಿಗೆ ಗೆಜೆಟೆಡ್ ಮ್ಯಾನೇಜರ್ ಹುದ್ದೆಗೆ ಬಡ್ತಿ ನೀಡುವ ಬಗ್ಗೆ
3) 'ಡಿ' ದರ್ಜೆ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಎ. ಚಿಕ್ಕಣ್ಣ ಇವರಿಗೆ ಅಟೆಂಡರ್ ಹುದ್ದೆಗೆ ಬಡ್ತಿ ನೀಡುವ ಬಗ್ಗೆ

9) <u>1998–99ನೇ ಸಾಲಿನ ನಿಧಿಗಳ ಆಯವ್ಯಯ ಪಟ್ಟಿಯನ್ನು ಅನುಮೋದಿಸುವ ಬಗ್ಗೆ</u>

ಸಭೆಯ ಮುಂದೆ ಮಂಡಿಸಲಾದ 1998–99ನೇ ಸಾಲಿನ ಮೂರೂ ನಿಧಿಗಳ ಆಯವ್ಯಯ ಮುಂಗಡ ಪತ್ರವನ್ನು ಸಮಿತಿಯು ವಿವರವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆಯವ್ಯಯವನ್ನು ಅನುಮೋದಿಸಿತು —

| | ಆದಾಯ ರೂ. | ಖರ್ಚು ರೂ. |
|---|---|---|
| 1. ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ | 4,74,75,000 | 1,06,65,000 |
| 2. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ | 4,54,75,000 | 1,66,60,000 |
| 3. ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ | 1,28,00,000 | 79,80,000 |

10) <u>ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ಯೋಜನೆಗೆ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಮಾಡಲಾಗುತ್ತಿರುವ ಖರ್ಚನ್ನು ತಡೆಗಟ್ಟುವ ಬಗ್ಗೆ</u>

ಅ) ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ಯೋಜನೆಗಳಿಗೆ ಪ್ರತಿ ವರ್ಷ ಎಷ್ಟು ಹಣ ಕೊರತೆ ಬೀಳುತ್ತದೆ ಮತ್ತು ವಂತಿಗೆ ಸಂಗ್ರಹಣೆಗೆ ಅನುಗುಣವಾಗಿ ಖರ್ಚನ್ನು ತಗ್ಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದರ ಬಗ್ಗೆ ಯೋಜನೆಯನ್ನು ತಯಾರಿಸಲು ಸಮಿತಿಯು ಸೂಚಿಸಿತು.

ಆ) 1991-92ರಿಂದ 1995-96ರವರೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಬಾಕಿ ಇದ್ದ ನಿಧಿಗಳ ವಂತಿಗೆ ವಸೂಲಿಗಾಗಿ ಸದಸ್ಯರುಗಳಾದ ಶ್ರೀ ಹೆ. ಉಮಾಪತಿ ಮತ್ತು ಶ್ರೀ ಎಂ.ಡಿ. ಸಿದ್ಧರಂಗಮೂರ್ತಿ ಇವರುಗಳು ರಾಜ್ಯಾದ್ಯಂತ ಪ್ರವಾಸ ಕೈಗೊಂಡಿರುತ್ತಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಎಷ್ಟು ತಾಲ್ಲೂಕುಗಳಿಂದ ಲೆಕ್ಕ ದಾಖಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಸಭೆಗೆ ನೀಡಲಾಯಿತು.

1996-97ರಿಂದ ಇಲ್ಲಿಯವರೆಗೆ ಬಹಳಷ್ಟು ತಾಲ್ಲೂಕುಗಳಿಂದ ವಂತಿಗೆ ಲೆಕ್ಕ ದಾಖಲಾಗಿಲ್ಲವಾದ್ದರಿಂದ, ಇನ್ನೊಂದು ಸುತ್ತು ಪ್ರವಾಸ ಕೈಗೊಂಡು ಬಾಕಿ ಇರುವ ವಂತಿಗೆ ವಸೂಲಿಗೆ ಕ್ರಮ ಕೈಗೊಳ್ಳುವಂತೆ ಸದಸ್ಯರನ್ನು ಕೋರಲಾಯಿತು.

11) <u>ನಿಧಿಗಳ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಟಿ.ಶಂಕರ ಇವರಿಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡುವ ಬಗ್ಗೆ</u>

ವೈದ್ಯಕೀಯ ಭತ್ಯೆ ಪಡೆಯುತ್ತಿರುವ ಈ ಕಚೇರಿಯ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಟಿ. ಶಂಕರರವರು ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುವ ಅವರ ಪತ್ನಿಯ ವೈದ್ಯಕೀಯ ಶುಶ್ರೂಷೆಗೆ ವೆಚ್ಚ ಮಾಡಿರುವ ಹಣದ ಮರುಪಾವತಿಗಾಗಿ ಸಲ್ಲಿಸಿರುವ ಮನವಿಯನ್ನು ಸಮಿತಿಯು ಪರಿಶೀಲಿಸಿ, ವೈದ್ಯಕೀಯ ವೆಚ್ಚದ ಮರುಪಾವತಿಗೆ ಸಂಬಂಧಿಸಿದಂತೆ ಸರ್ಕಾರವು ಹೊರಡಿಸಿರುವ ದಿನಾಂಕ 23-12-96ರ ಆದೇಶದಲ್ಲಿ ವಿನಾಯಿತಿ ಕೋರಿ ಹಿಂದೆ ಇಲ್ಲದಂತಹ ವಿನಾಯಿತಿಯನ್ನು ಈಗ ನೀಡಿ ವೈದ್ಯಕೀಯ ವೆಚ್ಚದ ಮರುಪಾವತಿ ಮಾಡುವ ಪರಿಪಾಠ ಸೂಕ್ತವಲ್ಲವೆಂದು ಅಧ್ಯಕ್ಷರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಸಮಿತಿಯು ಸಮರ್ಥಿಸಿ, ಸದರಿ ನೌಕರರ ವೈದ್ಯಕೀಯ ಪ್ರಸ್ತಾವನೆಯನ್ನು ತಿರಸ್ಕರಿಸಿತು.

12) <u>1998-99ನೇ ಸಾಲಿಗೆ ಪ್ರೌಢಶಾಲಾ ಹಂತದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸಹಪಠ್ಯ ಚಟುವಟಿಕೆಗಳನ್ನು ನಡೆಸಲು ಧನ ಸಹಾಯ ಬಿಡುಗಡೆ ಮಾಡುವ ಬಗ್ಗೆ</u>

ವಿದ್ಯಾರ್ಥಿಗಳಿಗೆ 1998-99ನೇ ಸಾಲಿನಲ್ಲಿ ಸಹಪಠ್ಯ ಚಟುವಟಿಕೆಗಳನ್ನು ನಡೆಸುವ ಸಲುವಾಗಿ ಪದವಿಪೂರ್ವ ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳಿಂದ ಬಂದಿದ್ದ ಪ್ರಸ್ತಾವನೆಗಳನ್ನು ಸಮಿತಿಯು ಪರಿಶೀಲಿಸಿ, ಈ ಕಾರ್ಯಕ್ರಮವನ್ನು ಆಯೋಜಿಸಲು ಪದವಿಪೂರ್ವ ಶಿಕ್ಷಣ ಇಲಾಖೆಗೆ ರೂ.4,00,000ಗಳನ್ನು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ರೂ.1,91,400ಗಳನ್ನು ಮಂಜೂರು ಮಾಡಿತು. ಕಾರ್ಯಕ್ರಮದ ವ್ಯವಸ್ಥಾಪನೆಗೆ (ವಿದ್ಯಾರ್ಥಿಗಳಿಗೆ ನೀಡಲಾಗುವ ಪ್ರವಾಸ ಭತ್ಯೆಯನ್ನು ಹೊರತುಪಡಿಸಿ) ಮಾಡುವ ವೆಚ್ಚವು ಶೇ.12ರಷ್ಟನ್ನು ಮೀರಬಾರದೆಂಬ ಷರತ್ತನ್ನು ವಿಧಿಸಲಾಯಿತು.

ರಾಜೀವಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯದಿಂದ ಪ್ರಸ್ತಾವನೆ ಬಂದನಂತರ ಅವರಿಗೂ ಮೇಲ್ಕಂಡ ಷರತ್ತಿಗೊಳಪಟ್ಟು ಧನ ಸಹಾಯ ಬಿಡುಗಡೆ ಮಾಡುವಂತೆ ಸಮಿತಿಯು ಸೂಚಿಸಿತು.

.. 5

13) ಕು॥ ದಿವ್ಯ ರಮೇಶ, ಪ್ರಥಮ ಬಿ.ಎ. ವಿದ್ಯಾರ್ಥಿ, ನ್ಯಾಷನಲ್ ಕಾಲೇಜು, ಬೆಂಗಳೂರು, ಇವರಿಗೆ ಆಸ್ಟ್ರೇಲಿಯಾದ ಮೆಲ್‌ಬೋರ್ನ್‌ನಲ್ಲಿ ನಡೆಯಲಿರುವ 4ನೇ ವಿಶ್ವ ಬ್ಯಾಡ್ಮಿಂಟನ (ಜೂನಿಯರ) ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು <u>ನಿಧಿಗಳಿಂದ ಧನ ಸಹಾಯ ನೀಡುವ ಬಗ್ಗೆ.</u>

ಬ್ಯಾಡ್ಮಿಂಟನ ಅಸೋಸಿಯೇಷನ ಆಫ್ ಇಂಡಿಯಾ ಇವರಿಂದ ಈ ಕಾರ್ಯಕ್ರಮದ ವಿವರ, ಸದರಿ ವಿದ್ಯಾರ್ಥಿನಿಗೆ ಸಂಘ ಸಂಸ್ಥೆಗಳಿಂದ ದೊರೆಯುವ ಆರ್ಥಿಕ ನೆರವು ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಿ, ನಿಧಿಗಳಿಂದ ನೀಡಬಹುದಾದ ಧನ ಸಹಾಯದ ಬಗ್ಗೆ ಅಭಿಪ್ರಾಯವನ್ನು ಸೂಚಿಸುವಂತೆ ಸಭೆಯಲ್ಲಿ ಉಪಸ್ಥಿತರಿದ್ದ ನಿರ್ದೇಶಕರು (ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ) ಇವರನ್ನು ಕೋರಲಾಯಿತು.

14) ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳ ಮುಖಾಂತರ ರಸಪ್ರಶ್ನೆ ಕಾರ್ಯಕ್ರಮವನ್ನು <u>ನಡೆಸುವ ಬಗ್ಗೆ.</u>

ಈ ಕಾರ್ಯಕ್ರಮಕ್ಕೆ , ಪ್ರಾಯೋಜಕರನ್ನು ಗೊತ್ತುಪಡಿಸಿಕೊಂಡು ಅವರ ಮುಖಾಂತರ ನಡೆಸಲು ತೀರ್ಮಾನಿಸಲಾಯಿತು. ಈ ವಿಚಾರದಲ್ಲಿ ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮದವರನ್ನು ಸಂಪರ್ಕಿಸುವಂತೆ ಸಮಿತಿಯು ಸೂಚಿಸಿತು.

15) <u>'ಶಿಕ್ಷಕ ಸದನ' ನಿರ್ಮಾಣದ ಬಗ್ಗೆ</u>

ಬೆಂಗಳೂರಿನ ಮಲ್ಲೇಶ್ವರಂ 13ನೇ ಅಡ್ಡ ರಸ್ತೆಯಲ್ಲಿರುವ ಸರ್ಕಾರಿ ಬಾಲಕಿಯರ ಸಂಯುಕ್ತ ಪದವಿಪೂರ್ವ ಕಾಲೇಜಿನ ಆವರಣದಲ್ಲಿ 'ಶಿಕ್ಷಕ ಸದನ' ನಿರ್ಮಿಸುವ ವಿಚಾರದಲ್ಲಿ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಮಿತಿಯು ಮೆಚ್ಚುಗೆ ಸೂಚಿಸಿತು. ಖಾಸಗಿ ಗುತ್ತಿಗೆದಾರರಿಂದ ಪೂರ್ವಾರ್ಹತೆ ಟೆಂಡರ ಕರೆಯಲು ಹಾಗೂ ಶಿಕ್ಷಕ ಸದನದ ನಕ್ಷೆ, ಅಂದಾಜು ವೆಚ್ಚ ಇವುಗಳ ಬಗ್ಗೆ ಚರ್ಚಿಸಲು ಕೂಡಲೇ 'ಶಿಕ್ಷಕ ಸದನ' ಮೇಲ್ವಿಚಾರಣಾ ಸಮಿತಿಯ ಸಭೆಯನ್ನು ಕರೆಯುವಂತೆ ಸಮಿತಿ ಸಲಹೆ ನೀಡಿತು.

ಇದಲ್ಲದೆ, ಸೆಂಟ್ರಲ್ ಜೂನಿಯರ ಕಾಲೇಜಿನ ಆವರಣದಲ್ಲಿ 'ಶಿಕ್ಷಕ ಸದನ' ನಿರ್ಮಿಸಲು ಕರ್ನಾಟಕದ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಲು ತುರ್ತು ಕ್ರಮ ಕೈಗೊಳ್ಳುವಂತೆ ಸಮಿತಿಯು ಸೂಚಿಸಿ, ಆ ಸ್ಥಳದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸ್ಥಳೀಯ ಕಛೇರಿಗಳಿಗೆ ಕಟ್ಟಡವನ್ನು ನಿರ್ಮಿಸಬಹುದೆಂದು ಅಭಿಪ್ರಾಯಪಟ್ಟಿತು.

16) ನಿಧಿಗಳ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳನ್ನು <u>ಕಾರ್ಯಗತಗೊಳಿಸುವ ಬಗ್ಗೆ.</u>

ಈ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸಮಿತಿಯು ಸೂಚಿಸಿತು.

17) ನಿಧಿಗಳ ಕಚೇರಿಗೆ ಒಂದು ಲೇಸರ್ ಪ್ರಿಂಟರನ್ನು ಖರೀದಿಸುವ ಬಗ್ಗೆ

ಈ ವಿಷಯವನ್ನು ಸಮಿತಿಯು ಚರ್ಚಿಸಿ, 2.5 ಲಕ್ಷ ರೂ.ಗಳನ್ನು ವೆಚ್ಚ ಮಾಡಿ ಲೇಸರ್ ಪ್ರಿಂಟರನ್ನು ಖರೀದಿಸುವ ಬದಲು, ವಾರ್ಷಿಕ ಒಪ್ಪಂದದ ಮೇಲೆ ಒಂದು ಲೇಸರ್ ಪ್ರಿಂಟರನ್ನು ಬಾಡಿಗೆಗೆ ಪಡೆಯುವಂತೆ ಸೂಚಿಸಿತು.

ಸಮಿತಿಯು ತೆಗೆದುಕೊಂಡ ಇತರೆ ನಿರ್ಣಯಗಳು!

ಸಾಹಿತ್ಯ ಮತ್ತು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿರುವ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ, ಅಂತಹವರಿಗೆ ಪ್ರೋತ್ಸಾಹ ಧನವನ್ನು ನೀಡಬೇಕೆಂದು ಸಮಿತಿಯು ತೀರ್ಮಾನಿಸಿತು. 21 ವರ್ಷ ವಯೋಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಇಂತಹ ಒಂದು ಯೋಜನೆಯನ್ನು ತಯಾರಿಸುವಂತೆ ಸಮಿತಿಯು ಸೂಚಿಸಿತು.

ವಂದನಾರ್ಪಣೆಯನಂತರ ಸಭೆಯ ಕಾರ್ಯಕಲಾಪಗಳು ಮುಕ್ತಾಯ ಗೊಂಡವು.

ಸಹಿ
(ಉಪೇಂದ್ರ ತ್ರಿಪಾಠಿ)
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,
ಹಾಗೂ ಉಪಸಮಿತಿಯ ಅಧ್ಯಕ್ಷರು.

' ಯಥಾ ಪ್ರತಿ '

ಪ್ರಭಾರಾಧಿಕಾರಿಗಳು
ಹಾಗೂ ಉಪಸಮಿತಿ ಸಭೆಯ ಸಂಚಾಲಕರು

Scanned with CamScanner

**ಕಾರ್ಯದರ್ಶಿ/ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-560002, ಇ ಮೇಲ್: kstbf63@gmail.com**

ಸಂಖ್ಯೆ: ಶಿ.ಕ.ನಿ/ಆಡಳಿತ-1/2021-22

ದಿನಾಂಕ: 13-02-2023
16

## ಪರಿಷ್ಕೃತ ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ವತಿಯಿಂದ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವೈದ್ಯಕೀಯ ಧನಸಹಾಯವನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ಪತ್ರ ದಿನಾಂಕ: 08-05-2018 ಮತ್ತು 07-10-2021.
2. ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಸಂಖ್ಯೆ 04 ಮತ್ತು 05 ದಿನಾಂಕ: 08-11-2021.
3. ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಸಂಖ್ಯೆ 04 ಮತ್ತು 06 ದಿನಾಂಕ: 14-12-2022.

** ** **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 04-12-2022ರಂದು ನಡೆದ ನಿಧಿಗಳ ಕಾರ್ಯಕಾರಿ ಸಮಿತಿ ಸಭೆಯ ನಡವಳಿ ಸಂಖ್ಯೆ 04ರಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ನೀಡುತ್ತಿರುವ ವೈದ್ಯಕೀಯ ಧನಸಹಾಯದ ಪರಿಷ್ಕರಣೆ ಕುರಿತು ಅಜೆಂಡಾ ಸಲ್ಲಿಸಲಾಗಿ ಈ ಕೆಳಕಂಡಂತೆ ವರ್ಗವಾರು ಪರಿಷ್ಕರಿಸಲು ತೀರ್ಮಾನಿಸಲಾಗಿರುತ್ತದೆ.

| ವರ್ಗೀಕರಣ | ಚಾಲ್ತಿಯಲ್ಲಿರುವ ದರ ರೂ.ಗಳಲ್ಲಿ | ಪರಿಷ್ಕರಿಸಬೇಕಾಗುವ ದರ ರೂ.ಗಳಲ್ಲಿ |
|---|---|---|
| ಎ | 10.000 | 20.000 |
| ಬಿ | 30.000 | 50,000 |
| ಸಿ | 50,000 | 75,000 |
| ಡಿ | 1,00,000 | 2,50,000 |

ಈ ಆದೇಶವು ದಿನಾಂಕ: 01-04-2023ರ ನಂತರ ಚಿಕಿತ್ಸೆ ಪಡೆಯುವ ಶಿಕ್ಷಕರು/ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿಗೆ ಅನ್ವಯವಾಗಲಿದೆ. ಉಳಿದಂತೆ ಉಲ್ಲೇಖ-1 ಮತ್ತು 2ರಲ್ಲಿ ಈಗಾಗಲೇ ಹೊರಡಿಸಿರುವ ಸುತ್ತೋಲೆಯಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಹಾಗೂ ಕಾರ್ಯದರ್ಶಿ/ಖಜಾಂಚಿಗಳು,
ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ
ಬೆಂಗಳೂರು.
13/2

ಪ್ರತಿಯನ್ನು,

1. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ/ಕಲಬುರಗಿ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
5. ರಾಜ್ಯದ ಎಲ್ಲಾ ಉಪನಿರ್ದೇಶಕರು/ಸಹನಿರ್ದೇಶಕರು, ಸಾ.ಶಿ.ಇಲಾಖೆ ಇವರಿಗೆ ಮಾಹಿತಿಗಾಗಿ.
6. ರಾಜ್ಯದ ಎಲ್ಲಾ ಸಹನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಮಾಹಿತಿಗಾಗಿ.
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇಲಾಖೆ ಇವರಿಗೆ ಮಾಹಿತಿಗಾಗಿ.
8. ರಾಜ್ಯದ ಎಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
9. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಕಛೇರಿ ಪ್ರತಿ.

## ಅರ್ಜಿದಾರರಿಗೆ ಸೂಚನೆ

1. ಪ್ರತಿ ಕಾಲಂನಲ್ಲಿ ಪೂರ್ಣ ಮಾಹಿತಿಯನ್ನು ನಮೂದಿಸಿ ಸಂಬಂಧಪಟ್ಟ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಥವಾ ಸಂಬಂಧಪಟ್ಟ ಮೇಲಾಧಿಕಾರಿಗಳ ಮೂಲಕ ಸಲ್ಲಿಸಬೇಕು.
2. ವರ್ಷದಲ್ಲಿ ಒಬ್ಬ ಶಿಕ್ಷಕರಿಂದ ಒಂದು ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು.
3. ವಿಳಾಸ ಬದಲಾದ ಪಕ್ಷದಲ್ಲಿ ಕೂಡಲೇ ಈ ಕಛೇರಿಗೆ ತಿಳಿಸಬೇಕು.
4. ಮೂಲ ಬಿಲ್ಲುಗಳನ್ನು ಹೊರತುಪಡಿಸಿ ಇತರೆ ದಾಖಲಾತಿಗಳ ಛಾಯಾ ಪ್ರತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
5. ಆಜೀವ ಸದಸ್ಯತ್ವ ಸಂಖ್ಯೆಯನ್ನು ಅರ್ಜಿಯ ಮುಖಪುಟದಲ್ಲಿ ಇದಕ್ಕಾಗಿಯೇ ಒದಗಿಸಿದ ಬಾಕ್ಸ್‌ನಲ್ಲಿ ನಮೂದಿಸಿ ಮತ್ತು ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.
6. ಅಪೂರ್ಣ ಮಾಹಿತಿಯನ್ನೊಳಗೊಂಡ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
7. ಶಿಕ್ಷಕರ ಮಕ್ಕಳು ವಯಸ್ಕರಾಗಿದ್ದು, ಅವರು ಪ್ರಸ್ತುತ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಲ್ಲಿ ಮಾತ್ರ ಅವರ ಅರ್ಜಿಗಳನ್ನು ಧನ ಸಹಾಯಕ್ಕೆ ಪರಿಗಣಿಸಲಾಗುವುದು. ಅಂತಹ ಪ್ರಕರಣಗಳಲ್ಲಿ ಶಿಕ್ಷಕರ ಮಕ್ಕಳು ಓದುತ್ತಿರುವ ಶಾಲಾ ಕಾಲೇಜಿನಿಂದ ವ್ಯಾಸಂಗ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
8. ಮೂಲ ಔಷಧಿ ಬಿಲ್‌ಗಳನ್ನು ದಿನಾಂಕವಾರು ಸರಿಯಾಗಿ ಜೋಡಿಸಿ ಕ್ರೋಢೀಕೃತ ಪಟ್ಟಿಯೊಂದಿಗೆ ಲಗತ್ತಿಸಿರಬೇಕು ಹಾಗೂ ಬಿಲ್ಲುಗಳ ಜೊತೆ ವೈದ್ಯರ ಚೀಟಿಯನ್ನು (Prescription) ಸಹ ಲಗತ್ತಿಸುವುದು. ಯಾವುದೇ ಛಾಯಾ ಪ್ರತಿಗಳನ್ನಾಗಲೀ ಅಥವಾ ಕಲರ್ ಜೆರಾಕ್ಸ್ ಪ್ರತಿಗಳನ್ನು ಪರಿಗಣಿಸಲಾಗುವುದಿಲ್ಲ.
9. ಅರ್ಜಿಗಳನ್ನು ಚಿಕಿತ್ಸೆ ಪಡೆದ ಒಂದು ವರ್ಷದೊಳಗೆ ಸಲ್ಲಿಸಬೇಕು. ಒಂದು ವರ್ಷದ ನಂತರ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
10. ಅರ್ಜಿಯೊಂದಿಗೆ ಕಾಯಿಲೆಯ ಸ್ವರೂಪ ಮತ್ತು ಚಿಕಿತ್ಸೆಯ ವಿವರಗಳನ್ನು (line of treatment/type of surgery) ಒಳಗೊಂಡ ಆಸ್ಪತ್ರೆಯ ಬಿಡುಗಡೆ ಸಾರಾಂಶದ ಪತ್ರದ ಮೂಲ ಪ್ರತಿ (Detailed discharge summary) ಅಥವಾ ದೃಢೀಕರಿಸಿದ ಛಾಯಾ ಪ್ರತಿ, ಚಿಕಿತ್ಸೆ ನೀಡಿದ ವೈದ್ಯರ ಸಹಿ, Seal ಮತ್ತು KMC ಯೊಂದಿಗೆ ಲಗತ್ತಿಸಬೇಕು.
11. ಒಳರೋಗಿಯಾಗಿ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಲ್ಲಿ ಮೂಲ Inpatient Bill ಹಾಗೂ ವೈದ್ಯಕೀಯ ಬಿಲ್ಲುಗಳನ್ನು ಕಡ್ಡಾಯವಾಗಿ ವೈದ್ಯರ ಸಹಿ, KMC No. ಮೊಹರಿನೊಂದಿಗೆ ಸಲ್ಲಿಸಬೇಕು. ಮತ್ತು ಮೂಲ ಹಣಕಾಸು ರಶೀದಿ (Receipts) ಅನ್ನು ಸಲ್ಲಿಸುವುದು.
12. ಹೊರ ರೋಗಿಯಾಗಿದ್ದಲ್ಲಿ ಹೃದಯ, ಕಿಡ್ನಿ ಮತ್ತು ಕ್ಯಾನ್ಸರ್ ಕಾಯಿಲೆಗಳಿಗೆ ಮಾತ್ರ ಪರಿಗಣಿಸಲಾಗುವುದು. ಪ್ರಸ್ತುತ ವರ್ಷದ/ಇತ್ತೀಚಿನ ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸುವುದು.

## ಅನುಬಂಧ – 1

ಕರ್ನಾಟಕ ರಾಜ್ಯ ಘಟಕದ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದಿಂದ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ನಿರ್ಧರಿಸಲ್ಪಟ್ಟ ವಿವಿಧ ಖಾಯಿಲೆಗಳ ವರ್ಗೀಕರಣ ಹಾಗೂ ಖಾಯಿಲೆಗಳಿಗೆ ನಿಗಧಿಪಡಿಸಿದ ಮರುಪಾವತಿ ಮಂಜೂರಾತಿಯ ಗರಿಷ್ಠ ಮಿತಿಯ ವಿವರಗಳು

### ವರ್ಗೀಕರಣ – ಎ (ಗರಿಷ್ಠ ನೆರವಿನ ಮಿತಿ ರೂ. 30,000)

(1) ಶಸ್ತ್ರಚಿಕಿತ್ಸೆ ಇಲ್ಲದೆ ಗುಣಪಡಿಸಿದ ಮೂಳೆ ಮುರಿತಗಳು (2) ಪೆಲ್ವಿಕ್ ಸರ್ಜರಿ (3) ಕೊಂಕು ಸಿರದ ಶಸ್ತ್ರ ಚಿಕಿತ್ಸೆ (4) ಕರಳುವಾಳುರಿತ ಚಿಕಿತ್ಸೆ (5) ಥೈರಾಯಿಡೆಕ್ಟಮಿ (6) ಪ್ರಾಸ್ಟೇಟ್ ಗ್ರಂಥಿ ಹೊರ ತೆಗೆಯುವಿಕೆ (7) ಅಂಡವಾಯು ಗುಣಪಡಿಸುವಿಕೆ (8) ಮೂತ್ರ ಕೋಶದ ಕಲ್ಲು ಹೊರತೆಗೆಯುವಿಕೆ (9) ಕಣ್ಣಿನ ಪೊರೆ ತೆಗೆಯುವ ಶಸ್ತ್ರ ಚಿಕಿತ್ಸೆ (10) ಚರ್ಮಕಸಿ ಚಿಕಿತ್ಸೆ (11) ಆಡ್ರಿನಲ್ ಗ್ರಂಥಿಗಳ ಶಸ್ತ್ರ ಚಿಕಿತ್ಸೆ (12) ಪ್ರಾಥಮಿಕ ಬಂಜೆತನ (13) ಕ್ಷಯ.

### ವರ್ಗೀಕರಣ – ಬಿ (ಗರಿಷ್ಠ ನೆರವಿನ ಮಿತಿ ರೂ. 50,000)

(1) ಅಸಮರ್ಪಕ ಕಾರ್ಯದ ಗರ್ಭಕೋಶದ ರಕ್ತಸ್ರಾವ (2) ಹಿಗ್ಗಲಸಿಕೆ ಹೆರೆತ ಗರ್ಭಾಶಯ ಸ್ವಚ್ಛತೆ (3) ಜಠರ ಮತ್ತು ಕರುಳಿನ ನಾಳದ ಶಸ್ತ್ರ ಚಿಕಿತ್ಸೆ (4) ಗರ್ಭಾಶಯ ಅಂಡಾಶಯ ಗ್ರಂಥಿಗಳ ಶಸ್ತ್ರ ಚಿಕಿತ್ಸೆ (5) ಮೊಲೆಗಳ ಗ್ರಂಥಿಗಳ ಚಿಕಿತ್ಸೆ (ಅರ್ಬುದ ಗ್ರಂಥಿಗಳನ್ನು ಬಿಟ್ಟು) (6) ಪಿತ್ತಕೋಶ ಹೊರತೆಗೆಯುವಿಕೆ (7) ಪಿತ್ತಕೋಶದ ಕಲ್ಲು ಹೊರತೆಗೆಯುವಿಕೆ (8) ಮೂತ್ರಪಿಂಡದ ಕಲ್ಲು ಹೊರ ತೆಗೆಯುವಿಕೆ (9) ಅಂಡಾಶಯ ಹೊರತೆಗೆಯುವಿಕೆ (10) ಗುಲ್ಮಚ್ಛೇದ (11) ಮೂಳೆ ಮುರಿತಗಳ ಶಸ್ತ್ರ ಚಿಕಿತ್ಸೆ (12) ಜನನಾಂಗ ದೋಷ ಸರಿಪಡಿಸುವ ಶಸ್ತ್ರ ಚಿಕಿತ್ಸೆ (13) ಅರ್ಬುದವಲ್ಲದ ಗ್ರಂಥಿಗಳ ಹೊರತೆಗೆಯುವಿಕೆ (14) ಶಸ್ತ್ರ ಚಿಕಿತ್ಸೆಯ ಹೆರಿಗೆ (15) ಮಾಸ್ಟಾಯ್ಡ್‌ಗಳ ಛೇದ (16) 30% ಹೆಚ್ಚಿನ ಸುಟ್ಟಗಾಯಗಳು.

### ವರ್ಗೀಕರಣ – ಸಿ (ಗರಿಷ್ಠ ನೆರವಿನ ಮಿತಿ ರೂ. 75000)

(1) ಜಾಂಡೀಸ್ ಸಿರ್ರೋಸಿಸ್ ಆಫ್ ಲಿವರ್ (2) ಮೆದುಳಿನ ರಕ್ತನಾಳದ ಅಪಘಾತದೊಂದಿಗೆ ಪಾರ್ಶ್ವವಾಯು (3) ಜಾಂಡೀಸ್–ಸೀರಮ್ ಹೆಪಾಟೈಟಿಸ್ (4) ಮೆದುಳು ಪೀಡಿತ ಅಪಸ್ಮಾರ (5) ಇಸ್ಕೆಮಿಕ್ ಹೃದಯದ ಖಾಯಿಲೆ (6) ಮೆದುಳಿನ ಉರಿಯೂತ (7) ಮೆದುಳು ಜ್ವರ (8) ಯಕೃತ್ತಿನ ವಿಫಲತೆಯ ಕೋಮ (9) ಅಂಗಚ್ಛೇದಗಳು (10) ಮುಚ್ಚಿದ ರಕ್ತನಾಳ ಗುಣಪಡಿಸುವಿಕೆ (11) ಹೃದಯಾಘಾತ (12) ಗರ್ಭಾಶಯದ ಹೊರಗಿನ ಗರ್ಭಧಾರಣೆ (13) ಮೂತ್ರ ಪಿಂಡಗಳ ವೈಫಲ್ಯ (14) ಮೆದುಳಿನ ಗ್ರಂಥಿಗಳ ಶಸ್ತ್ರ ಚಿಕಿತ್ಸೆ (15) ಹೆಚ್ಚಿನ ಫಾರಿನ್ ಬಾಡಿ ಹೊರತೆಗೆಯುವ ಶಸ್ತ್ರ ಚಿಕಿತ್ಸೆ (16) ಹತ್ತಗಣ್ಣಿನ ಶಸ್ತ್ರ ಚಿಕಿತ್ಸೆ (ರೆಟಿನಾ ಪದರ ತೆಗೆಯುವಿಕೆ) (17) ತಲೆಗಾಯಗಳು (ವೈದ್ಯಕೀಯ ತುರ್ತುಸ್ಥಿತಿ : ಶಸ್ತ್ರ ಚಿಕಿತ್ಸೆ) (18) ಬೆನ್ನು ಹುರಿ ಶಸ್ತ್ರ ಚಿಕಿತ್ಸೆ (ಬೆನ್ನು ಮೂಳೆಗಳ ಬಾಗುವಿಕೆ) (19) 50% ಹೆಚ್ಚಿನ ಸುಟ್ಟ ಗಾಯಗಳು (20) ರೋಗ ನಿರೋಧಕ ಶಕ್ತಿ ನ್ಯೂನತೆಯ ಅರ್ಜಿತ ಲಕ್ಷಣ (ಏಡ್ಸ್) (21) ಏಂಜಿಯೋಗ್ರಾಂ (22) ಉಸಿರಾಟದ ವಿಫಲತೆ.

### ವರ್ಗೀಕರಣ – ಡಿ (ಗರಿಷ್ಠ ನೆರವಿನ ಮಿತಿ ರೂ. 2,50,000)

(1) ಎಲ್ಲಾ ಅರ್ಬುದ ಪ್ರಕರಣಗಳು (2) ತೆರೆದ ಹೃದಯ ಶಸ್ತ್ರ ಚಿಕಿತ್ಸೆ (3) ಬದಲಿ ಮೂತ್ರ ಪಿಂಡದ ಕಸಿ (4) ಬೈಪಾಸ್ ಶಸ್ತ್ರ ಚಿಕಿತ್ಸೆ (5) ಅಂಗಗಳ ಕಸಿ ಜೋಡಣೆ ಹಾಗೂ ಇತರೆ ಮಾರಕ ಖಾಯಿಲೆಗಳಿಗೆ.

ANNEXURE-4

# ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕೆ.ಜಿ.ರಸ್ತೆ, ಬೆಂಗಳೂರು–560002

**ದಿನಾಂಕ: 22/08/2014 ರಂದು ಶಿಕ್ಷಕರ ಸದನದ ಸಭಾ ಕೊಠಡಿಯಲ್ಲಿ ನಡೆದ ರಾಜ್ಯ ಸಮಿತಿ ಸಭೆಯ ನಡವಳಿಗಳು.**

ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:–

| | | |
|---|---|---|
| 1 | ಶ್ರೀ.ಕಿಮ್ಮನೆ ರತ್ನಾಕರ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು | ಅಧ್ಯಕ್ಷರು |
| 2 | ಶ್ರೀ.ರಾಜಕುಮಾರ್ ಖತ್ರಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3 | ಶ್ರೀ ಮೊಹಮ್ಮದ್ ಮೊಹಸಿನ್, ಭಾಆಸೇ. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಕಾರ್ಯದರ್ಶಿಗಳು/ ಖಜಾಂಚಿಗಳು |
| 4 | ಶ್ರೀಮತಿ ಸುಷ್ಮಾ ಗೋಡಬೋಲೆ, ಭಾ.ಆ.ಸೇ. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ. ಬೆಂಗಳೂರು | ಸದಸ್ಯರು |
| 5 | ಶ್ರೀ.ಸಿ.ಗಂಗಾಧರ್, ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪರವಾಗಿ | ಸದಸ್ಯರು |
| 6 | ಶ್ರೀ.ಕುಮಾರಸ್ವಾಮಿ, ನಿವೃತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಪಾಂಡವಪುರ, ಮಂಡ್ಯ ಜಿಲ್ಲೆ | ನಾಮ ನಿರ್ದೇಶಿತ ಸದಸ್ಯರು |
| 7 | ಶ್ರೀ.ಎನ್.ನಂಜಪ್ಪಗೌಡ, ನಿವೃತ್ತ ಶಿಕ್ಷಕರು, ನಂ.1–61, 1ನೇ ಮೈನ್, ರಂಗನಾಥ ಪುರ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ | ನಾಮ ನಿರ್ದೇಶಿತ ಸದಸ್ಯರು |
| 8 | ಶ್ರೀ.ಸಣ್ಣನಾಯಕ್.ಡಿ.ಕೆ, ವಕೀಲರು, ನಂ.10, 9ನೇ ಮೈನ್, 10ನೇ ಕ್ರಾಸ್, 2ನೇ ಬ್ಲಾಕ್, ಜಯನಗರ, ಬೆಂಗಳೂರು–11 | ನಾಮ ನಿರ್ದೇಶಿತ ಸದಸ್ಯರು |

ಸಭೆಗೆ ಗೈರುಹಾಜರಾದ ಸದಸ್ಯರು:–

| | | |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 2 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 3 | ಶ್ರೀ ಬಸವರಾಜ ಗುರಿಕಾರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು | ಸದಸ್ಯರು |
| 4 | ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಂಯುಕ್ತ ಪಪೂ ಕಾಲೇಜುಗಳ ಸಂಘ, ಬೆಂಗಳೂರು | ಸದಸ್ಯರು |

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ರಾಜ್ಯ ಸಮಿತಿಯ ಸಭೆಯು ಶಿಕ್ಷಕರ ಕಲ್ಯಾಣ ನಿಧಿಯ ಮೂರನೇ ಮಹಡಿಯ ಸಭಾ ಕೊಠಡಿಯಲ್ಲಿ ಸನ್ಮಾನ್ಯ ಶ್ರೀ ಕಿಮ್ಮನೆ ರತ್ನಾಕರ, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಹಾಗೂ ನಿಧಿಗಳ

Chandrika Rani
Gazetted Manager
K.S.T.B.F / K.S.S.W.F/N.F.T.W.

| | | |
|---|---|---|
| 14 | ಶಿಕ್ಷಕರಲ್ಲಿ ಅಧ್ಯಯನ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ತಾಲ್ಲೂಕು ಹಂತದಿಂದ ರಾಜ್ಯ ಹಂತದವರೆಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ. ಈಗಾಗಲೇ ಸಹಪಠ್ಯ ಚಟುವಟಿಕೆಗಳಡಿಯಲ್ಲಿ ಐದು ವಿಷಯಗಳಲ್ಲಿ ಇದೇ ರೀತಿಯ ಸ್ಪರ್ಧೆಗಳು ನಡೆಯುತ್ತಿದ್ದು, ಆರನೆಯ ವಿಷಯವಾಗಿ ರಸಪ್ರಶ್ನೆ ಸ್ಪರ್ಧೆಗಳನ್ನು ಸೇರಿಸಬಹುದಾಗಿದೆ. ಸಹಪಠ್ಯ ಚಟುವಟಿಕೆಗಳಿಗೆ ರಾಜ್ಯ ಮಟ್ಟದಲ್ಲಿ ಈಗ ನೀಡಲಾಗುತ್ತಿರುವ ಬಹುಮಾನದ ಮೊತ್ತವನ್ನು ತಲಾ ರೂ.3000/-, ರೂ.2000/- ಹಾಗೂ ರೂ.1000/- ದಿಂದ ರೂ.5,000/-; ರೂ.3,000/- ಹಾಗೂ ರೂ.2,000/-ಕ್ಕೆ ಹೆಚ್ಚಿಸಬಹುದಾಗಿದೆ ಎಂಬ ಪ್ರಸ್ತಾವನೆಯನ್ನು ಸಮಿತಿಯ ನಿರ್ಧಾರಕ್ಕೆ ಮಂಡಿಸಲಾಯಿತು. | ಪ್ರಸ್ತಾವನೆ [illegible] |
| 15 | ಶಿಕ್ಷಕರಿಗೆ ಏಫ್ ವರ್ಗದ ಖಾಯಿಲೆಗಳ ಚಿಕಿತ್ಸೆಗಾಗಿ (ಬಿ.ಪಿ. ಸಕ್ಕರೆ ಖಾಯಿಲೆ, ಇತ್ಯಾದಿ) ಮಾಡಲಾದ ವೆಚ್ಚಕ್ಕೆ ಪರಿಹಾರ ಧನ ನೀಡುವುದನ್ನು ನಿಲ್ಲಿಸಲಾಗಿತ್ತು. ವಿದ್ಯಾರ್ಥಿಗಳಿಗೆ ಇದನ್ನು ಮುಂದುವರೆಸಲಾಗುತ್ತಿದೆ. ಶಿಕ್ಷಕರ ಪ್ರಕರಣಗಳಲ್ಲಿ ಸಹ. ವರ್ಷಕ್ಕೆ ಗರಿಷ್ಠ ರೂ.2000/-ಗಳ ಮಿತಿಗೊಳಪಟ್ಟು ಪುನ: ಪರಿಗಣಿಸುವ ಪ್ರಸ್ತಾವನೆಯನ್ನು ಸಮಿತಿಯ ನಿರ್ಧಾರಕ್ಕೆ ಮಂಡಿಸಲಾಯಿತು. | ಪ್ರಸ್ತಾವನೆಯನ್ನು ಪರಿಶೀಲಿಸಿ ಯಥಾಸ್ಥಿತಿ ಮುಂದುವರೆಸಲು ಸೂಚಿಸಲಾಯಿತು. |
| 16 | ಮಾರಣಾಂತಿಕ ಖಾಯಿಲೆಗಳ ಚಿಕಿತ್ಸೆಗಾಗಿ ವಿದ್ಯಾರ್ಥಿ/ಶಿಕ್ಷಕರಿಗೆ ಈಗ ಒಂದು ಬಾರಿ ಮಾತ್ರ ಗರಿಷ್ಠ ರೂ.30,000 ನೀಡಲಾಗುತ್ತಿರುವುದನ್ನು ವಾರ್ಷಿಕ ಗರಿಷ್ಠ ರೂ.30,000/- ಎಂದು ತಿದ್ದುಪಡಿ ಮಾಡಲು ಸಮಿತಿಯ ನಿರ್ಧಾರಕ್ಕೆ ಮಂಡಿಸಲಾಯಿತು. | ಪ್ರಸ್ತಾವನೆಯನ್ನು ಪರಿಶೀಲಿಸಿ ಗರಿಷ್ಠ ಮಿತಿಯನ್ನು ಒಂದು ಬಾರಿಯ ಕ್ರಮವಾಗಿ ಮಾತ್ರ ರೂ.50000/- ಕ್ಕೆ ಹೆಚ್ಚಿಸಲು ನಿರ್ಧರಿಸಲಾಯಿತು. |
| 17 | <u>ಉನ್ನತ ವ್ಯಾಸಂಗದ ಧನಸಹಾಯವನ್ನು ಹೆಚ್ಚಿಸುವ ಬಗ್ಗೆ</u><br><u>ಶಿಕ್ಷಕರ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕಾಗಿ ನೀಡಲಾಗುತ್ತಿರುವ ಧನಸಹಾಯದ ಮೊತ್ತವನ್ನು ಈ ಕೆಳಕಂಡಂತೆ ಪರಿಷ್ಕರಿಸಬಹುದಾಗಿದೆ.</u> | ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದಿಸಲಾಯಿತು. |

| ವಿದ್ಯಾರ್ಥಿಯು ಓದುತ್ತಿರುವ ತರಗತಿ | ಪ್ರಸ್ತುತ ನೀಡುತ್ತಿರುವ ಧನಸಹಾಯದ ದರ | ಹೆಚ್ಚಿಸಬಹುದಾದ ಪ್ರಸ್ತಾಪಿತ ದರ |
|---|---|---|
| ಪಿ.ಯು.ಸಿ | ರೂ.600 | ರೂ.1000 |
| ಬಿ.ಎ./ಬಿ.ಎಸ್.ಸಿ/ಬಿಕಾಂ | ರೂ.750 | ರೂ.1000 |

Chandrika Rani
Gazetted Manager

| | | |
|---|---|---|
| 20 | ನಿಧಿಗಳು ಸರ್ಕಾರದ ಆದೇಶದ ಅಡಿಯಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ನಡೆಯುತ್ತಿದ್ದು, ಇತ್ತೀಚೆಗೆ ನಿಧಿಗಳ ಆದಾಯಕ್ಕೆ ನಿಯಮಾನುಸಾರ ಆದಾಯ ತೆರಿಗೆ ಭರಿಸಲು ಆದಾಯ ತೆರಿಗೆ ಇಲಾಖೆಯವರು ನೋಟೀಸ್ ನೀಡಿದ್ದು, ಇದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯೊಂದಿಗೆ ವ್ಯವಹರಿಸುವಾಗ ಅವರು ಈ ಸಂಸ್ಥೆಯನ್ನು ಸಂಬಂಧಿಸಿದ ಪ್ರತ್ಯೇಕವಾಗಿ ನೋಂದಾಯಿಸಿಕೊಳ್ಳಲು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯನ್ನು ಒಂದು ಧಾರ್ಮಿಕ ದತ್ತಿ ಸಂಘವಾಗಿ ನೋಂದಾಯಿಸಿಕೊಳ್ಳಲು ಅನುಮತಿ ಕೋರಿದೆ. | [illegible] ಸರ್ಕಾರದ ಅಂಗಸಂಸ್ಥೆಯನ್ನಾಗಿಯೇ [illegible] ನೋಂದಣಿ ಮಾಡಲು ಅಗತ್ಯ ಕ್ರಮ [illegible] ಸೂಚಿಸಲಾಯಿತು. |

ರಾಜ್ಯ ಸಮಿತಿಯ ಕಾರ್ಯ ಕಲಾಪವು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

(ಮೊಹಮ್ಮದ್ ಮೊಹಸೀನ್)
ಆಯುಕ್ತರು, ಸಾ.ಶಿ.ಇ ಹಾಗೂ
ಕಾರ್ಯದರ್ಶಿ /ಖಜಾಂಚಿಗಳು

(ಕಿಮ್ಮನೆ ರತ್ನಾಕರ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
ಕರ್ನಾಟಕ ರಾಜ್ಯ

Gazetted Manager
K.S.T.B.F / K.S.S.W.F / N.F.T.W.
Shikshak Sadan,
K.G. Road, Bangalore - 09